ವಯಸ್ಸು, ಜರ್ಝರಿತ ಮನಸ್ಥಿತಿ ಧೃತರಾಷ್ಟ್ರನನ್ನು ಮುಗಿಸಿಹಾಕಿದ್ದವು. ಬದುಕು ಸಾಕೆನ್ನಿಸಿತ್ತೇನೊ, ದುರ್ಯೋಧನ ಹೋದಮೇಲೆ ಅವನ ಕುಟುಂಬದ ಯಾರಿಗೂ ಜೀವಕಳೆಯೇ ಇರಲಿಲ್ಲ. ಮಾತೆ ಗಾಂಧಾರಿಯೂ ಮೌನವಾಗಿಯೇ ದಶಕಗಳ ಕಾಲ ಜೀವನ ತೆಗೆದು ಪುತ್ರಶೋಕದಲ್ಲೇ ಪ್ರಾಣ ತೊರೆದಿದ್ದಳು.

ಅತ್ತ ಯಾದವರ ಕುಲದ ಹೊಡೆದಾಟದಲ್ಲಿ ಸ್ವತಃ ವಾಸುದೇವ ಮನೆ ತೊರೆದಿದ್ದ. ಕಾಡಿನಲ್ಲಿ ಯಾವುದೋ ಬೇಡನ ಬಾಣಕ್ಕೆ ಸಿಕ್ಕು ಸಂಪೂರ್ಣ ಭೂಮಂಡಲದ ದೇವತಾಪುರುಷ ಎನ್ನಿಸಿಕೊಂಡವನು ಏಕಾಂಗಿಯಾಗಿ ಸತ್ತುಹೋಗಿದ್ದ. ಕೊನೆಯ ಕ್ಷಣದಲ್ಲಿ ಯಾರೊಬ್ಬನೂ ಅವನ ಹತ್ತಿರವಿರಲಿಲ್ಲ. ಜೀವಮಾನವಿಡೀ ಧರ್ಮರಕ್ಷಣೆಗೆ ನನ್ನ ಬೆಂಬಲ ಎಂದು ಘೋಷಿಸಿ ಎದ್ದುನಿಂತಿದ್ದ ಕೇಶವನನ್ನೂ ವಿಧಿ ಅಮಾನುಷವಾಗಿ ಕೊನೆಗಾಣಿಸಿತ್ತು. ಹೀಗೆ ಪ್ರತೀ ಕಾಲಾವಧಿಯಲ್ಲೂ ಹತ್ತಿರದವರ, ತನ್ನದೇ ಸಮಾಜದ, ತನ್ನವರೆಲ್ಲರ ಸಾವಿನ ಸರಣಿಯೇ ನೋಡುತ್ತಲೇ ಧರ್ಮರಾಯ ರಾಜ್ಯಭಾರ ಮಾಡುತ್ತಿದ್ದರೆ ಈ ಭಾರ ಕೊನೆಗೂ

